**ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ,**

**ಕುಮಟಾ**

**ಸಿ.ಸಿ.ನಂ.1133/2024**

ಸಿ.ಡಬ್ಲ್ಯು 05

ಪಿ.ಡಬ್ಲ್ಯು 04

| | |
|---|---|
| ಸಾಕ್ಷಿದಾರರ ಹೆಸರು | - ರಾಘವೇಂದ್ರ ನಾರಾಯಣ ಮಡಿವಾಳ |
| ತಂದೆಯ ಹೆಸರು | - ನಾರಾಯಣ ಮಡಿವಾಳ |
| ವಯಸ್ಸು | - 45 ವರ್ಷ |
| ಉದ್ಯೋಗ | - ಕೆ.ಎಸ್.ಆರ್.ಟಿ ಸಿ ನಿರ್ವಾಹಕರ |
| ವಾಸ್ತವ್ಯ | - ಮಿರ್ಜಾನ |

(ಇಂದು ದಿನಾಂಕಃ **09-04-2026** ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ - ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು ದಿನಾಂಕಃ 09/05/2024 ರಂದು ನಾನು ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ಕೆಎ 31 ಎಫ್ 1488 ನೇದ್ದರಲ್ಲಿ ನಿರ್ವಾಹಕನಾಗಿ ಆರೋಪಿತನು ಚಾಲಕನಾಗಿ ನಿಯೋಜನೆಗೊಂಡಿರುತ್ತೇವೆ. ನಮ್ಮ ಬಸ್ಸ ಸುಮಾರು 01-00 ಗಂಟೆಯ ಸಂದರ್ಭದಲ್ಲಿ ರಾಷ್ಟ್ರೀಯ ಹೆದ್ದಾರಿ 766 ನೇದ್ದರ ಮೇಲೆ ಶಿರ್ಶಿ ಕಡೆಯಿಂದ ಕುಮಟಾ ಕಡೆಗೆ ಬರುತ್ತಿರುವಾಗ ಮಾಸ್ತಿಹಳ್ಳದ ರಸ್ತೆಯ ಸಮೀಪ ಲಾರಿ ಸಂಖ್ಯೆ ಎಚ್ ಆರ್ 74 ಬಿ 8339 ನೇ ಚಾಲಕನು ಸದ್ರಿ ಲಾರಿಯನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನಮಂ

ಬಸ್ಸಗೆ ಢಿಕ್ಕಿ ಹೊಡೆದಿರುತ್ತಾನೆ. ಈ ಅಪಘಾತದಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿತನ ಯಾವುದೇ ತಪ್ಪು ಇರುವುದಿಲ್ಲ. ಆತನು ಬಸ್ಸನ್ನು ನಿಧಾನವಾಗಿ ಚಲಾಯಿಸುತ್ತಿದ್ದನು. ಈ ಕುರಿತಾಗಿ ಪೊಲೀಸರು ನನ್ನನ್ನು ವಿಚಾರಿಸಿರುವುದಿಲ್ಲ. ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಷದ್ರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಈ ಅಪಘಾತವು ದಿನಾಂಕಃ 09/05/2024 ರಂದು 16–15 ಗಂಟೆಯ ಸುಮಾರಿಗೆ ಕುಮಟಾದ ಮಾಸ್ತಿಹಳಚಳದ ತಿರುವಿನಲ್ಲಿ ರಾ ಮೇಲೆ ಹೇಳಿದ ನಮ್ಮ ಬಸ್ಸನ್ನು ಆರೋಪಿತನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿ ಎಚ್ ಆರ್ 74 ಬಿ 8339 ಗೆ ಢಿಕ್ಕಿ ಹೊಡೆದು ಅಪಘಾತಪಡಿಸಿದ್ದಾನೆ ಎಂದರೆ ಸರಿಯಲ್ಲ. ಈ ಅಪಘಾತದಿಂದ ಚಾಸಾ 1 ರವರಿಗೆ ಹಾಗೂ ಲಾರಿ ಚಾಲಕ ಇಮ್ರಾನ ಇವರಿಗೆ ಹಾಗೂ ಬಸ್ಸನಲ್ಲಿ ಪ್ರಯಾಣಿಸುತ್ತಿದ್ದ ಜೋಯಾ ಇವರಿಗೆ ಸಾದಾ ಸ್ವರೂಪದ ಗಾಯ ಆಗಿರುತ್ತದೆ ಎಂದರೆ ಸರಿಯಲ್ಲ.

ಈ ಕುರಿತಾಗಿ ನಾನು ದಿನಾಂಕಃ 10/05/2024 ರಂದು ಪೊಲೀಸರ ಮುಂದೆ ಹೇಳಿಕೆ ಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ9 ಎಂದು ಗುರುತಿಸಲಾಯಿತು. ನಿಪಿ 9 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**C.W.** 05 **P.W.** 04

**ಪಾಟೀ ಸವಾಲು –ಆರೋಪಿ ಪರ ಕುಮಾರಿ. ಸಿ ಎಮ್ ಪಿ ವಕೀಲರಿಂದ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರಭಾರ ಪ್ರಧಾನ ಪ್ರ.ದ.ನ್ಯಾ.ದಂ. ಕುಮಟಾ